ಸಾಕ್ಷಿಯನ್ನು ದಿಃ 03-02-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಶ್ರಿ.ಆರ್.ಜಿ.ಕೆ ವಕೀಲರಿಂದ

ಸರ್ವೆ ನಂ.60/1 ಇದು ಮೂಲತಹಃ ಎಲೂಗಿ ಎಂಬುವವರ ಕುಟುಂಬದವರ ಸ್ವತ್ತಾಗಿರುತ್ತದೆ ಎಂದರೆ ಸರಿ. ಮರಿಬಸವ್ವ ಈಗ ಮೃತಪಟ್ಟಿರುತ್ತಾರೆ ಎಂದರೆ ಸರಿ. ಅವಳು ಮೃತಪಟ್ಟನಂತರ ವಾದಿಯರಿಬ್ಬರೂ ಮತ್ತು ನನಗೆ ಸದರಿ ಸ್ವತ್ತು ಬಂದಿರುತ್ತದೆ ಎಂದರೆ ಸರಿ. ಸದರಿ ಸ್ವತ್ತು ನಮ್ಮ ಮೂರು ಜನ ಹೆಸರಿನಲ್ಲಿ ದಾಖಲು ಇರುತ್ತದೆ ಎಂದರೆ ಸರಿ. ಸದರಿ ಜಮೀನು ಫಲವತ್ತಾಗಿದ್ದು ಅದರಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ ಎಂದರೆ ಸರಿ.

2. ಸರ್ವೆ ನಂ.2 ಕ್ಷೇತ್ರ 3 ಎಕರೆ 31 ಗುಂಟೆ ಜಮೀನು ಭೂನ್ಯಾಯಮಂಡಳಿಯಿಂದ ನನ್ನ ತಂದೆಗೆ ಮಂಜೂರಾಗಿರುತ್ತದೆ ಎಂದರೆ ಸರಿ. ಸದರಿ ಸ್ವತ್ತಿನ ಮೇಲೆ ನನ್ನ ತಂದೆ ಯಾವುದೇ ರೀತಿಯ ದಾನ ಆಗಲೀ ವಿಲ್ ಆಗಲೀ ಮಾಡದೇ ಮೃತಪಟ್ಟಿರುತ್ತಾರೆ. ನನ್ನ ತಂದೆ ಸ್ವತ್ತಿಗೆ ನಾನು ಮತ್ತು ನನ್ನ ಸಹೋದರಿಯರಿಬ್ಬರು ವಾರಸುದಾರರು ಎಂದರೆ ಸರಿ.

3. ಸಿ.ಟಿ.ಎಸ್ ನಂ.605/ಬಿ ಇದು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಮೇಲೆ ಹೇಳಿದ ಜಮೀನುಗಳನ್ನು ನನ್ನ ತಂದೆ 50-51 ನೇ ಸಾಲಿನಿಂದ ಉಳುಮೆ ಮಾಡಿಕೊಂಡು ಬಂದಿರುತ್ತಾರೆ. ಸದರಿ ಜಮೀನುಗಳಿಂದ ಒಳ್ಳೆಯ ಆದಾಯ ಬರುತ್ತದೆ ಎಂದರೆ ಸಾಕ್ಷಿಯು ಒಂದು ಜಮೀನಿನಲ್ಲಿ 4 ಸಾವಿರ ಮತ್ತು ಇನ್ನೊಂದರಲ್ಲಿ 16 ಸಾವಿರ ಬರುತ್ತದೆ ಎಂದು ನುಡಿಯುತ್ತಾರೆ. ಸದರಿ ಜಮೀನು ಮತ್ತು ಮನೆಗೆ ನಾನು ಮತ್ತು ವಾದಿಯರು ಜಂಟಿ ಮಾಲಿಕರು ಎಂದರೆ ಸಾಕ್ಷಿಯು Tenancy ಜಮೀನಿಗೆ ವಾದಿಯರು ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನು ಭೂನ್ಯಾಯ ಮಂಡಳಿ ನನ್ನ ತಂದೆಗೆ ಮಂಜೂರು ಮಾಡಿತ್ತು ಎಂದರೆ ಸರಿ. ಮನೆ ಮತ್ತು ಜಮೀನುಗಳು ಇಂದಿಗೂ ವಾಟ್ನಿ ಆದೇ ಜಂಟಿ ಮಾಲಿಕತ್ವದಲ್ಲಿ ಇರುತ್ತವೆ ಎಂದರೆ ಸಾಕ್ಷಿಯು ಸರ್ವೆ ನಂ.60/1 ಮನೆ ಇವುಗಳಲ್ಲಿ 2014 ರಂದು ಹಿರಿಯರ ಸಮ್ಮುಖ ವಾಟ್ನಿ ಆಗಿದ್ದು, Tenancy ಜಮೀನಿಗೆ ವಾದಿಯರಿಗೆ ಸಂಬಂಧ

ಇರುವುದಿಲ್ಲ ಎಂದು ನುಡಿಯುತ್ತಾರೆ. ವಾಟ್ನಿ ಆದ ಬಗ್ಗೆ ದಾಖಲಾತಿಗಳನ್ನು ಮುಂದಿನ ಮುದ್ದತ್ತಿಗೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ವಾಟ್ನಿ ಪತ್ರವನ್ನು ನಾನು ನೊಂದು ಮಾಡಿಸಿರುವುದಿಲ್ಲ. ದಾವಾ ಆಸ್ತಿಗಳಲ್ಲಿ ಆಸ್ತಿ ಹಂಚಿಕೆ ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನನಗೆ ವ್ಯವಸಾಯದಿಂದ ಬಂದ ಆದಾಯವನ್ನು ಹೊರತುಪಡಿಸಿ ಬೇರೆ ಯಾವುದೇ ಆದಾಯ ಇರುವುದಿಲ್ಲ. ನನ್ನ ಮಕ್ಕಳು ಸಹ ವ್ಯವಸಾಯವನ್ನು ಮಾತ್ರ ಮಾಡುತ್ತಾರೆ . ದಾವಾ ಐಟಂ ನಂ.ಸಿ ಅಲ್ಲಿ ದಾಖಲಾಗಿರುವ ಎರಡು ಸ್ವತ್ತುಗಳನ್ನು ನನ್ನ ಮಕ್ಕಳ ಹೆಸರಿಗೆ ಘರಾಣೆ ಸ್ವತ್ತಿನಲ್ಲಿ ಬಂದ ಉತ್ಪನ್ನಗಳಿಂದ ಖರೀದಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ದಾವಾ ಐಟಂ.ನಂ.ಬಿ2 ಅನ್ನು ಮಾರಾಟ ಮಾಡಿ ಅದರಿಂದ ಬಂದ ಹಣದಲ್ಲಿ ದಾವಾ ಐಟಂ ನಂ.ಸಿ ಅಲ್ಲಿ ಇರುವ ಸ್ವತ್ತುಗಳನ್ನು ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಐಟಂ.ನಂ.ಸಿ ಯಸ್ವತ್ತುಗಳನ್ನು ಘರಾಣಾ ಸ್ವತ್ತಿನ ಉತ್ಪನ್ನದಿಂದ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಜಮೀನುಗಳನ್ನು ಮಾರಾಟ ಮಾಡಲು ಯಾವುದೇ ಅಡಚಣೆ ಇರಲಿಲ್ಲ ಎಂದರೆ ಸರಿ. ದಾವಾ ಐಟಂ ನಂ.ಸಿ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಗಳಿಗೆ ಭಾಗಾಂಶ ನೀಡಬೇಕು ಎಂಬ ಕಾರಣದಿಂದ ಒಟ್ಟು ಕುಟುಂಬದ ಆಸ್ತಿಗಳನ್ನು ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗಳಿಗೆ ತಲಾ 1/3 ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ. ವಾದಿಯರಿಗೆ ಹಿಸ್ಸೆ ನೀಡಬೇಕೆಂಬ ಕಾರಣಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಅದೆ.

Sd/-03-02-2025
ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾದಂ. ಲಕ್ಷ್ಮೇಶ್ವರ

ಸಾಕ್ಷಿದಾರರ ಸಹಿಃ